ಇಂದು ದಿನಾಂಕ:10.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು:** ಆರೋಪಿಯ ಪರ ಶ್ರೀ ಹೆಚ್‌ಜಿಎ ವಕೀಲರಿಂದ:

1. ನಾನು SSLC ವರೆಗೆ ಓದಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಕಳೆದ 15-20 ವರ್ಷಗಳಿಂದ ಹೋಟೆಲ್ ಕೆಲಸ ಮಾಡುತ್ತಿದ್ದೇನೆ. ನಾನು ನಡೆಸುವ ಹೋಟೆಲ್‌ನ ಹೆಸರು ಹೋಟೆಲ್ ಶ್ರೀನಿವಾಸ್. ನಾನು ನ್ಯಾಯಾಲಯಕ್ಕೆ ದೂರು ಸಲ್ಲಿಸುವ ಕಾಲಕ್ಕೆ ನನ್ನ ವಿಳಾಸ ಮತ್ತು ವೃತ್ತಿಯನ್ನು ತಿಳಿಸಿರುತ್ತೇನೆ. ನನಗೆ ಪ್ರತಿ ವರ್ಷಕ್ಕೆ ಆದಾಯ 8-9 ಲಕ್ಷ ಬರುತ್ತದೆ. ನಾನು ಕಳಸ ಪಟ್ಟಣದಲ್ಲಿ ವಾಸವಾಗಿದ್ದೇನೆ. ಹೋಟೆಲ್‌ನ್ನು ಹೊರತುಪಡಿಸಿ ನನಗೆ ಯಾವುದೇ ಆಸ್ತಿ ಇರುವುದಿಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಸೇರಿ ಒಟ್ಟು 4 ಜನ ಇರುತ್ತೇವೆ. ಪ್ರತಿ ತಿಂಗಳು ನಮ್ಮ ಮನೆ ಖರ್ಚಿಗೆ 10-15 ಸಾವಿರ ರೂಪಾಯಿ ಬೇಕು.

2. ಆರೋಪಿ ನನಗೆ 15 ವರ್ಷಗಳಿಂದ ಪರಿಚಯ. ಅವರು ಕಳಸದಲ್ಲಿ ಅಡಿಕೆ ವ್ಯಾಪಾರ ಮಾಡುತ್ತಾರೆ. ಆರೋಪಿ ಕಳಸ ಪಟ್ಟಣದಲ್ಲಿ ಅಡಿಕೆ ಮಂಡಿಯನ್ನು ಇಟ್ಟಿದ್ದಾರೆ. ಸದರಿ ಮಂಡಿಯ ಹೆಸರು ನನಗೆ ಗೊತ್ತಿಲ್ಲ. ದೂರು ದಾಖಲಿಸುವಾಗ ಆರೋಪಿಯು ಮಾಡುವ ವ್ಯವಹಾರದ ಬಗ್ಗೆ ಮತ್ತು ಅವರು ಕಳಸದಲ್ಲಿ ಹೊಂದಿರುವ ಅಡಿಕೆ ಮಂಡಿಯ ಬಗ್ಗೆ ಹೇಳಿರುತ್ತೇನೆ. ಆರೋಪಿ 2018 ರ ಏಪ್ರಿಲ್ ತಿಂಗಳಿನಲ್ಲಿ ಹಣ ಕೇಳಿರುತ್ತಾರೆ. ಈ ಪ್ರಸಕರಣ ವ್ಯವಹಾರಕ್ಕಿಂತ ಮೊದಲು ಆರೋಪಿ ನನ್ನ ಬಳಿ 10-15 ಸಾವಿರ ರೂಪಾಯಿ ತೆಗೆದುಕೊಂಡು ಪಾವತಿ ಮಾಡಿದ್ದರು. ಆರೋಪಿಯಿಂದ ನಾನು ಯಾವುದೇ ಸಾಲ ತೆಗೆದುಕೊಂಡಿಲ್ಲ. ನಾನು ಆರೋಪಿಗೆ ಅಡಿಕೆ ಕೊಡಿಸುವುದು ಮತ್ತು ಅವರಿಂದ ತೆಗೆದುಕೊಳ್ಳುವುದು ಮಾಡುತ್ತಿರಲಿಲ್ಲ. 2018 ಕ್ಕಿಂತ ಪೂರ್ವದಲ್ಲಿ ಆರೋಪಿ ನನ್ನ ಬಳಿ ಹಣ ಪಡೆದಿದ್ದರು. ಆ ರೀತಿ ಹಣ ತೆಗೆದುಕೊಳ್ಳುವಾಗ ನಾನು ಭದ್ರತೆಗಾಗಿ ಯಾವುದೇ ದಾಖಲಾತಿ ಪಡೆದುಕೊಳ್ಳುತ್ತಿರಲಿಲ್ಲ.

3. ಆರೋಪಿಯ ಮನೆಯಲ್ಲಿ ಯಾರು ಯಾರು ವಾಸವಿದ್ದಾರೆ ನನಗೆ ಗೊತ್ತಿಲ್ಲ. ಅವರಿಗೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿಯು ನನಗೆ ಪರಿಚಯ ಇದ್ದಾರೆ ಎನ್ನುತ್ತಾರೆ. ನಾನು ಮತ್ತು ಆರೋಪಿ ಒಂದೇ ಪಂಗಡದವರು ಎಂದರೆ ಸರಿ. ನನಗೆ ಆರೋಪಿ ಸಂಬಂಧಿಕನಲ್ಲ. ಹಣ ಕೇಳುವಾಗ ಆರೋಪಿ ಮತ್ತು

ನಾನು ಮಾತ್ರ ಇದ್ದೆವು. 10 ಲಕ್ಷ ಹಣ ತೆಗೆದುಕೊಂಡ ತಿಂಗಳು ಮತ್ತು ವಾರ ನನಗೆ ನೆನಪಿಲ್ಲ. ಆರೋಪಿ ನಮ್ಮ ಮನೆಗೆ ಮಧ್ಯಾಹ್ನ ಬಂದಿದ್ದರು ಆಗ ಹಣ ನೀಡಿರುತ್ತೇನೆ. ಹಣ ಪಡೆದುಕೊಳ್ಳುವ ಕಾಲಕ್ಕೆ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ರೀತಿಯ ಕರಾರು ಆಗಿಲ್ಲ, ಆದರೆ ಆರೋಪಿ ನನಗೆ ಚೆಕ್ ನೀಡಿರುತ್ತಾರೆ. ಚೆಕ್ ಪಡೆದುಕೊಂಡ ಬಗ್ಗೆ ನಾನು ಯಾವುದೇ ಲೆಕ್ಕಪುಸ್ತಕದಲ್ಲಿ ಬರವಣಿಗೆ ಮಾಡಿರುವುದಿಲ್ಲ. ನಾನು ಹೋಟೆಲ್ ವ್ಯಾಪಾರ ಮಾಡುವುದರಿಂದ ಪ್ರತಿದಿನದ ವ್ಯವಹಾರಗಳ ಬಗ್ಗೆ ದಿನಚರಿ ಪುಸ್ತಕದಲ್ಲಿ ನಮೂದಿಸುತ್ತೇನೆ ಎಂದರೆ ಸರಿಯಲ್ಲ.

4. ಆರೋಪಿ ನನಗೆ ಒಂದು ತಿಂಗಳು ಮೊದಲೇ ಹಣ ಕೇಳಿದ್ದರು. ಆರೋಪಿ ನನ್ನ ಬಳಿ ಹಣ ತೆಗೆದುಕೊಂಡು ಹೋಗುವ ಕಾಲಕ್ಕೆ ಸುಮಾರು ಅರ್ಧ ಗಂಟೆ ಮಾತ್ರ ಇದ್ದರು. ಆ ದಿನ ಆರೋಪಿ ನಮ್ಮ ಮನೆಗೆ ಬಂದಿದ್ದರು. ನನ್ನ ದೂರಿನಲ್ಲಿ ಆ ಬಗ್ಗೆ ಹೇಳಿ ಬರೆಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ನಿಪಿ-3 ನೋಟಿಸ್‌ನಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಆರೋಪಿ ನೋಟಿಸನ್ನು ಯಾವಾಗ ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಇನ್ನೂ ಎರಡು ಚೆಕ್ ಬೌನ್ಸ್ ಪ್ರಕರಣಗಳನ್ನು ದಾಖಲಿಸಿದ್ದೇನೆ. ನನ್ನ ವಿರುದ್ದ ಯಾವುದೇ ಪ್ರಕರಣ ದಾಖಲಾಗಿಲ್ಲ.

5. ನಾನು ಎರಡು ವರ್ಷಗಳ ಹಿಂದೆ ಅರುಣ್ ತಾವ್ರೋ ಎಂಬುವವರ ವಿರುದ್ದ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ಸದರಿ ಅರುಣ್ ತಾವ್ರೋ ಮತ್ತು ಆರೋಪಿ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಅರುಣ್ ತಾವ್ರೋ ಮತ್ತು ಆರೋಪಿ ನನ್ನ ಜೊತೆ ಮಾತುಕತೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣ ಐದೂವರೆ ಲಕ್ಷ ಹಣಕ್ಕೆ ರಾಜಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜಿ ಕಾಲಕ್ಕೆ ನಾನು ಆರೋಪಿಯಿಂದ ನಿಪಿ-1 ಚೆಕ್‌ನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ನಾನು ರಾಜಿ ಕಾಲಕ್ಕೆ ಪಡೆದುಕೊಂಡ ಆರೋಪಿ ಮತ್ತು ಅರುಣ್ ತಾವ್ರೋ ರವರುಗಳ ಚೆಕ್ ಮತ್ತು ಆಧಾರ್ ಕಾರ್ಡ್ ಗಳನ್ನು ಈವರೆಗೂ ವಾಪಾಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವ ದಿನಾಂಕದ ಚೆಕ್‌ನ್ನು ನನಗೆ ಕೊಟ್ಟಿರುತ್ತಾರೆ ಎಂದು ನೆನಪಿಲ್ಲ.

6. ಈ ಪ್ರಕರಣವನ್ನು ದಾಖಲಿಸುವ ಮೊದಲು ನಾನು ಆರೋಪಿಗೆ ದೂರವಾಣಿ ಕರೆ ಮಾಡಿಲ್ಲ. ನಾನು ಆರೋಪಿಯನ್ನು 2-3 ಬಾರಿ ಹಣ ಕೇಳಲು ಹೋಗಿದ್ದೆ. ನಿಪಿ-1 ಚೆಕ್‌ನ್ನು ಆರೋಪಿ ಮೊದಲೇ

ಬರೆದುಕೊಂಡು ಬಂದಿದ್ದರು, ಆದರೆ ನನ್ನ ಎದುರು ಸಹಿ ಮಾಡಿರುತ್ತಾರೆ. ನಿಪಿ-1 ರಲ್ಲಿರುವ ಬರವಣಿಗೆಗೂ ಆರೋಪಿಯ ಸಹಿಗೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಬರೆದಿರುವ ಬರವಣಿಗೆಗಳು ಮತ್ತು ಸಹಿ ಬೇರೆ ಬೇರೆ ಇಂಕ್‌ನಿಂದ ಬರೆಯಲಾಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗೂ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅರುಣ್ ತಾವ್ರೋ ರವರು ನೀಡಿದ ಆರೋಪಿಯ ಚೆಕ್‌ನ್ನು ಉಪಯೋಗಿಸಿಕೊಂಡು ಸುಳ್ಳು ಪ್ರಕರಣ ದಾಖಲಜಿಸಿದ್ದೇನ ಎಂರದೆ ಸರಿಯಲ್ಲ. ನನ್ನ ಹೋಟೆಲ್‌ನಲ್ಲಿ ವ್ಯವಹಾರ ಆಗುವುದಿಲ್ಲ ಎಂರದೆ ಸರಿಯಲ್ಲ. ನಾನು ಪ್ರತಿವರ್ಷ 15-20 ಲಕ್ಷ ಆದಾಯ ಗಳಿಸುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬಡವನಾಗಿದ್ದು 10 ಲಕ್ಷ ರೂಪಾಯಿ ಹಣದ ಅವಶ್ಯಕತೆ ಅವರಿಗೆ ಇಲ್ಲ ಎಂದರೆ ಸರಿಯಲ್ಲ.

7. ಆರೋಪಿ ನನ್ನ ಬಳಿ ಅಡಿಕೆ ವ್ಯಾಪಾರ ಮಾಡಲು ಹಣ ತೆಗೆದುಕೊಂಡಿರುತ್ತಾರೆ. 2018 ನೇ ಸಾಲಿನಲ್ಲಿ ಆರೋಪಿ ಅಡಿಕೆ ವ್ಯಾಪಾರ ಮಾಡಿರುತ್ತಾರೆ. ಸದರಿರವರು ಎಲ್ಲೆಲ್ಲಿ ಅಡಿಕೆ ವ್ಯಾಪಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಈಗ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ನನ್ನ ನಡುವೆ ಕಳೆದ ಒಂದು ವರ್ಷದಿಂದ ಮಾತುಕತೆ ಇಲ್ಲ. ನಾನು ಎಸ್‌ಬಿಐ, ಕೆನಾರಾ ಬ್ಯಾಂಕ್ ಮತ್ತು ಕರ್ನಾಟಕ ಬ್ಯಾಂಕುಗಳಲ್ಲಿ ಖಾತೆ ಹೊಂದಿರುತ್ತೇನೆ. ಸದರಿ ಮೂರು ಖಾತೆಗಳಲ್ಲಿಯೂ ಸಹ ನಾನು ವ್ಯವಹಾರ ಮಾಡುತ್ತೇನೆ. ನಾನು ಹೋಟೆಲ್ ವ್ಯವಹಾರಕ್ಕೋಸ್ಕರ ಎಸ್‌ಬಿಐ ಬ್ಯಾಂಕಿನಲ್ಲಿ ಸಾಲ ಮಾಡಿದ್ದೇನೆ. ಸದರಿ ಸಾಲ ತೆಗೆದುಕೊಂಡು ಸುಮಾರು 5-6 ವರ್ಷಗಳಾಗಿವೆ. ಸದರಿ ಬ್ಯಾಂಕಿನಲ್ಲಿ ನನಗೆ ಈಗ 10 ಲಕ್ಷ ಓಡಿ ಇದೆ. ಎಸ್‌ಬಿಐ ಬ್ಯಾಂಕನ್ನು ಹೊರತುಪಡಿಸಿ ಕರ್ನಾಟಕ ಬ್ಯಾಂಕಿನಲ್ಲಿ ಸಹ ಸಾಲ ಪಡೆದಿದ್ದೇನೆ. ಆರೋಪಿಗೆ ನಾನು ನಗದು ರೂಪದಲ್ಲಿ ಹಣ ನೀಡಿರುತ್ತೇನೆ. ಆ ಹಣ ನನ್ನ ಬಳಿಯೇ ಇತ್ತು. ಆ ಹಣವನ್ನು ನಾನು 10-15 ವರ್ಷಗಳಿಂದಲೂ ಉಳಿತಾಯ ಮಾಡಿ ಇಟ್ಟುಕೊಂಡಿದ್ದೆ. ಪ್ರತಿದಿನ ನನ್ನ ಹೋಟೆಲ್‌ನಲ್ಲಿ 10-12 ಸಾವಿರ ವ್ಯಾಪಾರ ಆಗುತ್ತದೆ. ನನಗೆ ಪ್ರತಿದಿನ ಹೋಟೆಲ್‌ಗೆ ಸುಮಾರು 6 ಸಾವಿರ ಖರ್ಚು ಬೀಳುತ್ತದೆ. ತಿಂಗಳ ಪ್ರತಿದಿನವೂ ಸಹ ನನ್ನ ಹೋಟೆಲ್ ತೆರೆದಿರುತ್ತದೆ.

8. ನಾನು ಕಳೆದ 2-3 ವರ್ಷಗಳಿಂದ ಆದಾಯ ತೆರಿಗೆ ಪಾವತಿಸುತ್ತಿದ್ದೇನೆ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಮ್ಮ ಹೋಟೆಲ್‌ನಲ್ಲಿ ಯಾವುದೇ ವ್ಯಾಪಾರ ಆಗದಿದ್ದರೂ ಸಹ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯ ನನಗೆ ಹಣ ಸಂಪಾದನೆ ಇಲ್ಲ ಎಂದರೆ ಸರಿಯಲ್ಲ. ಈ

ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

C/c ಎ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ